International Journal of Kannada Research 2016; 2(4): 17-21

International Journal of Kannada Research
www.kannadajournal.com

ISSN: 2454–5813
IJSR 2016; 2(4): 17-21
© 2016 IJKS
www.kannadajournal.com
Received: 04-08-2016
Accepted: 05-09-2016

**ಅನಿತ ಎಚ್ ಸಿ**
ದೃಶ್ಯ ಕಲಾವಿದೆ ಮತ್ತು ಪಿ ಎಚ್ ಡಿ ಸಂಶೋಧಕರು, ದೃಶ್ಯಕಲಾ ವಿಭಾಗ ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ ಜೈನ್ ವಿಶ್ವವಿದ್ಯಾಲಯ. ಬೆಂಗಳೂರು

**ಸೌಮ್ಯ ಮಂಜುನಾಥ್ ಚವಾಣ್**
ಕಲಾವಿದರು ಮತ್ತು ಸಂಶೋಧಕರು, ಮುಖ್ಯಸ್ಥರು ದೃಶ್ಯಕಲಾ ವಿಭಾಗ, ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ, ಜೈನ್ ವಿಶ್ವವಿದ್ಯಾಲಯ. ಬೆಂಗಳೂರು

**Correspondence**
**ಅನಿತ ಎಚ್ ಸಿ**
ದೃಶ್ಯ ಕಲಾವಿದೆ ಮತ್ತು ಪಿ ಎಚ್ ಡಿ ಸಂಶೋಧಕರು, ದೃಶ್ಯಕಲಾ ವಿಭಾಗ ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ ಜೈನ್ ವಿಶ್ವವಿದ್ಯಾಲಯ. ಬೆಂಗಳೂರು

# ನೃತ್ತ ಮೂರ್ತಿ ರೂಪ ವೈಶಿಷ್ಟ್ಯದಲ್ಲಿ ಶಿವನ ಅಭಿವ್ಯಕ್ತಿ

**ಅನಿತ ಎಚ್ ಸಿ, ಸೌಮ್ಯ ಮಂಜುನಾಥ್ ಚವಾಣ್**

## ೧. ಪೀಠಿಕೆ

ಭಾರತೀಯ ಚಿ]ತ್ರಕಲಾ ಪರಂಪರೆಯನ್ನು ಭಿತ್ತಿಚಿತ್ರ ಮತ್ತು ಸಾಂಪ್ರದಾಯಿಕ ಚಿತ್ರಕಲಾ ಶೈಲಿಗಳೆಂದು ಎರಡು ಪ್ರಕಾರವಾಗಿ ಗುರುತಿಸಲಾಗಿದೆ. ಭಿತ್ತಿಚಿತ್ರ ಕಲಾಕೃತಿಗಳು ದೇವಾಲಯ, ಅರಮನೆಗಳ ಒಳಗೋಡೆ ಮತ್ತು ಮೇಲ್ಛಾವಣಿಗಳನ್ನು ಆವರಿಸಿದರೆ, ಸಾಂಪ್ರದಾಯಿಕ ಚಿತ್ರಕಲಾಕೃತಿಗಳು ಕಾಗದ ಮತ್ತು ಬಟ್ಟೆಗಳ ಮೇಲೆ ಅಭಿವ್ಯಕ್ತಿಗೊಂಡಿವೆ. ಕರ್ನಾಟಕದ ಮೈಸೂರು ಸಾಂಪ್ರದಾಯಿಕ ಚಿತ್ರಕಲಾ ಶೈಲಿಯು ದಕ್ಷಿಣ ಭಾರತದಲ್ಲಿ ಸ್ವತಂತ್ರ ಶೈಲಿಯಾಗಿ ಬೆಳವಣಿಗೆ ಹೊಂದಿದ್ದು ಚಿತ್ರಕಲಾ ಪರಂಪರೆಯಲ್ಲಿ, ಪ್ರಾಂತ್ಯದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಶೈಲಿಯ ಕಲಾಕೃತಿಗಳಲ್ಲಿ ಅಭಿವ್ಯಕ್ತಿಗೊಂಡಿರುವ ಶಿವನ ನೃತ್ತಮೂರ್ತಿ ಕಲಾಕೃತಿಗಳನ್ನು ಪ್ರಸ್ತುತ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

## ೨. ಮೈಸೂರು ಸಾಂಪ್ರದಾಯಿಕ ಚಿತ್ರಕಲಾ ಶೈಲಿ

ದಕ್ಷಿಣ ಭಾರತದಲ್ಲಿ ಕಲೆ ರಾಜಾಶ್ರಯದಿಂದಲೇ ಅಭಿವೃದ್ಧಿ ಹೊಂದಿರುವುದನ್ನು ಕಲಾ ಇತಿಹಾಸದಲ್ಲಿ ಕಾಣುತ್ತೇವೆ. ವಿಜಯನಗರ ಸಾಮ್ರಾಜ್ಯ ೧೫೬೫ರಲ್ಲಿ[i] ಪತನಗೊಂಡ ನಂತರ ಅಲ್ಲಿನ ಕಲಾವಿದರು ಜೀವನೋಪಾಯಕ್ಕಾಗಿ ರಾಜಾಶ್ರಯದ ನಿರೀಕ್ಷೆಯಿಂದ ಶ್ರೀರಂಗಪಟ್ಟಣ, ತಾಂಜಾವೂರು, ಮತ್ತು ಹೈದ್ರಾಬಾದ್ ಪ್ರಾಂತ್ಯಗಳಿಗೆ ವಲಸೆ ಹೋದರು. ಶ್ರೀರಂಗಪಟ್ಟಣಕ್ಕೆ ವಲಸೆ ಬಂದ ಕಲಾವಿದರಿಗೆ ಆ ಸಮಯದಲ್ಲಿ (೧೫೭೮–೧೬೧೭)[ii] ಮೈಸೂರು ಸಂಸ್ಥಾನವನ್ನು ಆಳುತ್ತಿದ್ದ ರಾಜಾ ಒಡೆಯರ್ ಅವರು ಆಶ್ರಯ ನೀಡಿ ಕಲಾಪರಂಪರೆಯನ್ನು ಬೆಳೆಸಿದರು. ಹೀಗೆ ವಿಜಯನಗರದ ಭಿತ್ತಿಚಿತ್ರಕಲಾ ಶೈಲಿಯ ಅಂಶಗಳೊಂದಿಗೆ ಮೈಸೂರು ಸಾಂಪ್ರದಾಯಿಕ ಶೈಲಿಯು ಬೆಳೆದು ವೈಶಿಷ್ಟ್ಯಪೂರ್ಣವಾದ ಮತ್ತು ಸ್ವಂತಿಕೆಯುಳ್ಳ ಕಲಾಶೈಲಿಯಾಗಿ ಬೆಳೆಯಿತು. ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಾವು ರಚಿಸಿದ ಗ್ರಂಥಗಳಲ್ಲಿ ಚಿತ್ರಗಳನ್ನೂ ಸೇರಿಸಿ ಚಿತ್ರಕಲೆಗೆ ಉನ್ನತವಾದ ಸ್ಥಾನವನ್ನು ಕಲ್ಪಿಸಿದರು.

ಕರ್ನಾಟಕದ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳು ನಿರೂಪಣಾತ್ಮಕ ಗುಣಗಳಿಂದ ಕೂಡಿದ್ದು, ಧಾರ್ಮಿಕ ಮತ್ತು ಪೌರಾಣಿಕ ವಿಷಯಗಳನ್ನು ಯಥಾರ್ಥವಾಗಿ ನಿರೂಪಿಸುತ್ತವೆ. ಶ್ರೀ ತತ್ವ – ನಿಧಿ[iii] ಹಸ್ತಪ್ರತಿ ಗ್ರಂಥವು ಮೈಸೂರು ಚಿತ್ರಕಲಾ ಶೈಲಿಯ ಆಕರಗ್ರಂಥವಾಗಿದ್ದು, ದೇವಾನುದೇವತೆಗಳನ್ನು ಶಾಸ್ತ್ರೋಕ್ತವಾಗಿ, ಸಾಂಪ್ರದಾಯಿಕ ಶೈಲಿಯಲ್ಲಿ ಅಭಿವ್ಯಕ್ತಿಸಲಾಗಿದೆ. ವಿಷ್ಣುಧರ್ಮೋತ್ತರ ಪುರಾಣ, ಅಭಿಲಾಷಿತಾರ್ಥ ಚಿಂತಾಮಣಿ, ಮನಸೋಲ್ಲಾಸ, ಶಿವತತ್ವ ರತ್ನಾಕರ ಗ್ರಂಥಗಳಲ್ಲಿ ಸಾಂಪ್ರದಾಯಿಕ ಚಿತ್ರಕಲಾ ಶೈಲಿಯ ರಚನಾಕ್ರಮ, ತಾಂತ್ರಿಕ ಅಂಶಗಳು ಮತ್ತು ದೇವಾನುದೇವತೆಯರ ಪ್ರತಿಮಾಶಾಸ್ತ್ರದ ಪ್ರಮಾಣಗಳು ಮುಂತಾದ ವಿಷಯಗಳ ವಿವರಣೆಯಿದ್ದು ಈ ಗ್ರಂಥಕ್ಕೆ ಆಧಾರವಾಗಿವೆ.

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಂದ ರಚಿತವಾದ ಶ್ರೀತತ್ವನಿಧಿ ಗ್ರಂಥದಲ್ಲಿ ಒಂದು ಭಾಗವಾಗಿರುವ, ಶಿವನನ್ನು ಆಧಾರಿಸಿ ರಚಿಸಿರುವ 'ಶಿವನಿಧಿ' ಯು ಶಾಸ್ತ್ರೀಯ ಗ್ರಂಥವಾಗಿದೆ. ಶಿವನಿಧಿ ಗ್ರಂಥದಲ್ಲಿ ಬರುವ ದೇವಾನುದೇವತೆಯರ ವಿವರಗಳನ್ನು ಆಗಮ ಶಾಸ್ತ್ರ, ಧ್ಯಾನ ಶ್ಲೋಕಗಳಿಂದ ಆಯ್ದುಕೊಳ್ಳಲಾಗಿದೆ. 'ಶಿವನಿಧಿ' ಗ್ರಂಥದಲ್ಲಿ ಶಿವನನ್ನು ಕುರಿತಂತೆ ಐದುನೂರಾ ಎಪ್ಪತ್ತೂರು ಶ್ಲೋಕಗಳಿಂದ ಕೂಡಿದ್ದು, ಶಿವನ ನೂರಾ ಅರವತ್ತನಾಲ್ಕು ವಿವಿಧ ರೂಪ ವೈಶಿಷ್ಟ್ಯಗಳಿದ್ದು, ಶಿವನ ಏಳು ತಾಂಡವಮೂರ್ತಿ ಸ್ವರೂಪಗಳನ್ನು ಅಭಿವ್ಯಕ್ತಿಸಿದ್ದಾರೆ. ಆನಂದತಾಂಡವ, ಸಂಧ್ಯಾತಾಂಡವ, ಉಮಾತಾಂಡವ, ಗೌರಿತಾಂಡವ, ಕಾಳಿಕಾತಾಂಡವ, ತ್ರಿಪುರತಾಂಡವ ಮತ್ತು ಸಂಹಾರತಾಂಡವಮೂರ್ತಿಗಳ ಸ್ವರೂಪವು ಶೈವಕಾರಣಾಗಮದಲ್ಲಿ ಬರುವ ವಿವರಣೆಯನ್ನು

ಆಧಾರಿಸಿದೆ. ಈ ಪ್ರಬಂಧದಲ್ಲಿ ಏಳು ತಾಂಡವಮೂರ್ತಿ ಸ್ವರೂಪಗಳಲ್ಲಿ ಕಂಡುಬರುವ ಶೈವ ನಿರೂಪಣೆ ಮತ್ತು ಪ್ರತಿಮಾಶಾಸ್ತ್ರದ ಅಂಶಗಳನ್ನು ವಿಶ್ಲೇಷಿಸಲಾಗಿದೆ.

## ೩. ನೃತ್ತಮೂರ್ತಿಯಾಗಿ ಶಿವನ ರೂಪವೈಶಿಷ್ಟ್ಯ

ಶಿವನನ್ನು ನೃತ್ಯಪ್ರಿಯ, ನಿತ್ಯನೃತ್ಯ, ನೃತ್ಯಶೀಲ, ನರ್ತನಶೀಲ, ನರ್ತೇಶ್ವರ, ಗೀತಶೀಲ, ವಾದನೃತ್ಯಪ್ರಿಯನೆಂದು ಪುರಾಣಗಳಲ್ಲಿ ಕರೆದಿದ್ದಾರೆ. ಶಿವಸಹಸ್ರನಾಮ, ಲಿಂಗಪುರಾಣ ಮತ್ತು ವಾಯುಪುರಾಣಗಳಲ್ಲಿ ಶಿವನ ನೃತ್ಯದ ಬಗ್ಗೆ ವಿವರಣೆ ದೊರೆಯುತ್ತದೆ. ಹದಿನೆಂಟು ವಿದ್ಯೆಗಳಲ್ಲಿ ನೃತ್ಯ ಮತ್ತು ಸಂಗೀತಗಳೆರೆಡು ಪ್ರಕಾರಗಳು ಉನ್ನತ ಸ್ಥಾನ ಪಡೆದಿದ್ದು, ಶಿವ ಅವುಗಳ ವ್ಯಾಖ್ಯಾನಕಾರನಾಗಿರುವುದರಿಂದ ಸಹಜವಾಗಿಯೇ ನೃತ್ಯವು ಶಿವನ ಆರಾಧನೆಯ ಒಂದು ಪ್ರಮುಖ ಸಾಧನವಾಗಿದೆ ಎಂದು ಶಿವರಾಮಮೂರ್ತಿಯವರು ವಿವರಿಸಿದ್ದಾರೆ.[ತ] ಪ್ರೇಕ್ಷಕರನ್ನು ಸನ್ಮಾರ್ಗದಲ್ಲಿ ನಡೆಸಿ, ಅಭ್ಯುದಯ ಗಳಿಸಿ ಜೀವನದಲ್ಲಿ ಮುಕ್ತಿ ಪಡೆಯುವುದು ಎಂಬ ಉನ್ನತವಾದ ಸಂಕಲ್ಪವನ್ನು ನಾಟ್ಯವು ಪ್ರೋತ್ಸಾಹಿಸುತ್ತದೆ. ಬ್ರಹ್ಮನು ಋಗ್ವೇದದಿಂದ ಸಾಹಿತ್ಯದ ಅಂಶ, ಸಾಮವೇದದಿಂದ ಸಂಗೀತವನ್ನು, ಅಭಿನಯವನ್ನು ಯಜುರ್ ವೇದದಿಂದ, ಮತ್ತು ಅಥರ್ವ ವೇದದಿಂದ ಚಿತ್ತವೃತ್ತಿ ಮತ್ತು ಮಾಧುರ್ಯವನ್ನು ಸೇರಿಸಿಕೊಂಡು ನಾಟ್ಯವೇದವನ್ನು ಸೃಷ್ಟಿಸಿ, ಭರತನು ದಾಖಲಿಸಿಕೊಂಡಿದ್ದನ್ನು ಶಿವನು ಪ್ರದರ್ಶಿಸಿದನೆಂದು ಶಿವರಾಮಮೂರ್ತಿಯವರು ಉಲ್ಲೇಖಿಸಿದ್ದಾರೆ.[ತ] ಶಿವನ ಗಣಗಳಲ್ಲಿ ಒಬ್ಬನಾದ ತಾಂಡು ಎಂಬುವನು ಶಿವನ ಇಚ್ಛೆಯಂತೆ ಭರತನಿಂದ ೧೦೮ ಕರಣಗಳನ್ನು ದಾಖಲಿಸಿದನೆಂದು, ಹಾಗಾಗಿ ತಾಂಡವನೃತ್ಯವೆಂಬ ಹೆಸರು ಪ್ರಚಲಿತಕ್ಕೆ ಬಂದಿತೆಂದು ವರದಪಾಂಡೆಯವರು ವಿವರಿಸಿದ್ದಾರೆ. ಭರತನ ನಾಟ್ಯಶಾಸ್ತ್ರದಲ್ಲೂ ೧೦೮ ವಿವಿಧ ಬಗೆಯ ನೃತ್ಯಗಳಿದ್ದುದರ ವಿವರವಿದೆ. ೧೦೮ ನೃತ್ಯ ಪ್ರಕಾರಗಳನ್ನು ಶಿವನು ಪ್ರದರ್ಶನ ಮಾಡಿದುದರ ಉಲ್ಲೇಖವು ಶೈವಾಗಮಗಳಲ್ಲಿ ದೊರೆಯುತ್ತದೆ.[ತು]

ಅಂಶುಭೇಧಾಗಮ, ಮತ್ಸ್ಯಪುರಾಣ, ಕೂರ್ಮಪುರಾಣ, ಶಿವಮಹಾಪುರಾಣಗಳಲ್ಲಿ ಶಿವನ ನೃತ್ತ ಸ್ವರೂಪ ಮತ್ತು ಪ್ರತಿಮಾಶಾಸ್ತ್ರವನ್ನು ವಿವರಿಸಿದ್ದಾರೆ. ಆಗಮಗಳಲ್ಲಿ ಶಿವನ ನೃತ್ತ ಸ್ವರೂಪವನ್ನು, ರಚನೆ, ಪ್ರತಿಷ್ಠಾಪನೆ, ಮತ್ತು ಪೂಜಾ ವಿಧಿವಿಧಾನಗಳ ವಿವರಣೆಯಿದೆ. ಭಟ್ ಅವರು ವಿವರಿಸಿರುವಂತೆ, ಶಿವನ ನಾಟ್ಯದ ಭಂಗಿಯು ಐದು ಕ್ರಿಯೆಗಳನ್ನು ನಿರೂಪಿಸುತ್ತದೆ. ಅವೆಂದರೆ 'ಸೃಷ್ಟಿ'ಯು ಕೈಯಲ್ಲಿ ಹಿಡಿದಿರುವ ಢಮರುವಿನಿಂದ, 'ಸ್ಥಿತಿ'ಯು ಅಭಯಮುದ್ರೆಯಿಂದ, 'ಸಂಹಾರ'ವು ಅಗ್ನಿಯಿಂದ, 'ಅಜ್ಞಾನ'ವನ್ನು ಅಪಸ್ಮಾರವನ್ನು ತುಳಿಯುತ್ತಿರುವುದರಿಂದ, ಮತ್ತು ಎತ್ತಿದ ಕಾಲಿನಿಂದ 'ಅನುಗ್ರಹ'ವನ್ನು ದಯಪಾಲಿಸುವ ಶಿವನನ್ನು ನಟರಾಜನಾಗಿ, ನೃತ್ತಮೂರ್ತಿಯಾಗಿ ಅಭಿವ್ಯಕ್ತಿಸಿದ್ದಾರೆ.[ತು] ಹೆನ್ರಿಚ್ ಝಿಮ್ಮರ್ ಅವರು ವಿವರಿಸಿರುವಂತೆ ಶಿವನು ಬ್ರಹ್ಮಾಂಡವನ್ನು ಪ್ರತಿನಿಧಿಸುವ ನೃತ್ಯಶೀಲನಾಗಿದ್ದು, ನೃತ್ತಮೂರ್ತಿಯಾಗಿ, ತನ್ನಲ್ಲೇ ಸಾಕಾರಗೊಳ್ಳುವುದರ ಜೊತೆಗೆ ಚಿರಂತನವಾದ ಶಕ್ತಿಯನ್ನು ಅಭಿವ್ಯಕ್ತಿಸುತ್ತಾನೆ ಮತ್ತು ತನ್ನ ಭಾವಾವೇಶದಿಂದ ಕೂಡಿದ, ತನ್ನ ಸುತ್ತಲೂ ಸುತ್ತುವ ಪರಿಭ್ರಮಣದಿಂದ ಸೃಷ್ಟಿ, ಸ್ಥಿತಿ, ಮತ್ತು ಪ್ರಳಯಗಳಿಗೆ ಕಾರಣೀಭೂತನಾಗಿರುವುದಲ್ಲದೆ, ಪ್ರಕೃತಿ ಮತ್ತು ಎಲ್ಲಾ ಜೀವಿಗಳೂ ಶಿವನ ನೃತ್ಯದಿಂದ ಸಾಕಾರಗೊಂಡಿವೆ.[ತು]

ಶಿವನ ನೃತ್ಯವು ಮೂರು ಅಂಶಗಳನ್ನು ಪ್ರಧಾನವಾಗಿ ಅಭಿವ್ಯಕ್ತಿಸುತ್ತದೆ. ಒಂದು, ಕಮಾನಿನ ರೂಪದಲ್ಲಿರುವ ಶಿವನ ಲಯಬದ್ಧವಾದ ನಟನೆಯಿಂದ ಬ್ರಹ್ಮಾಂಡದಲ್ಲಿನ ಎಲ್ಲಾ ಚಲನೆಗೆ ಆಧಾರವಾಗಿರುವುದು, ಎರಡನೆಯದು, ಮಾನವರನ್ನು ಭ್ರಮಾಲೋಕದಿಂದ, ಮಾಯೆಯಿಂದ ಮುಕ್ತಿಗೊಳಿಸುವುದು ನೃತ್ಯದ ಪ್ರಮುಖ ಉದ್ದೇಶ; ಮೂರನೆಯದು ವಿಶ್ವದ ಮಧ್ಯದಲ್ಲಿರುವ ಚಿದಂಬರಂ ಪ್ರದೇಶವು ಶಿವನ ಹೃದಯಕ್ಕೆ ಹತ್ತಿರವಾಗಿರುವುದರಿಂದ ಅಲ್ಲಿ ನೃತ್ಯ ಪ್ರದರ್ಶನವನ್ನು ನೀಡುವುದರ ಮೂಲಕ ವಿಶ್ವಕ್ಕೆ ನಟರಾಜನಾಗಿ ವಿರಾಜಿಸುತ್ತಿದ್ದಾನೆ.

ಶಿವನ ತಾಂಡವನೃತ್ಯ ಸ್ವರೂಪವು ತಾಮಸ ಮತ್ತು ರೌದ್ರ ಲಕ್ಷಣಗಳನ್ನು ಅಭಿವ್ಯಕ್ತಿಸುವುದನ್ನು ಭೈರವ ಮತ್ತು ವೀರಭದ್ರ ರೂಪವೈಶಿಷ್ಟ್ಯದಲ್ಲಿ ಕಾಣುತ್ತೇವೆ; ನೃತ್ಯವನ್ನು ದಹನಕಾರ್ಯ ನಡೆಯುವ ಸ್ಥಳಗಳಲ್ಲಿ ಶಿವನು ತನ್ನ ದೇವಿಯೊಂದಿಗೆ ಪ್ರದರ್ಶಿಸಿದನು ಎಂಬ ಉಲ್ಲೇಖವಿದೆ.[ಥ] ತಾಂಡವನೃತ್ಯವೆಂಬುದು ತ್ರಿಪುರದಹನದ ನಂತರ ಶಿವನು ಪ್ರಸ್ತುತ ಪಡಿಸಿದ ನೃತ್ಯಕ್ಕೆ ಮತ್ತು ರೂಪವ್ಯಶಿಷ್ಟ್ಯಕ್ಕೆ ಬಂದಂತಹ ಹೆಸರು. ಗಜಸಂಹಾರ, ಅಂಧಕನ ಸಂಹಾರದ ನಂತರವೂ ಶಿವನು ತಾಂಡವ ನಾಟ್ಯವನ್ನು ಪ್ರದರ್ಶಿಸಿದನೆಂದು, ತನ್ನ ಸತಿ ಪಾರ್ವತಿಯನ್ನು ಮೆಚ್ಚಿಸಲು ಲಾಸ್ಯ ನೃತ್ಯವನ್ನು ಮಾಡಿದುದರ ವಿವರಣೆಗಳು ಪುರಾಣಗಳಲ್ಲಿ ಉಲ್ಲೇಖಗೊಂಡಿದೆ. ಮುಂದಿನ ಭಾಗದಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಯಾಗಿರುವ ಆನಂದತಾಂಡವನೃತ್ಯ ಕಲಾಕೃತಿಯನ್ನು ವಿಶ್ಲೇಷಿಸಲಾಗಿದೆ.

## ೪. ಆನಂದತಾಂಡವ

ಶಿವನ ಆನಂದತಾಂಡವ ನೃತ್ಯವು ಪರಮಾನಂದವನ್ನು ನೀಡುವ ಸಾಧನವಾಗಿದೆ. ಇದಕ್ಕೆ ನಾದಾಂತ ನಟನ ಮತ್ತು ಭುಜಂಗತ್ರಾಸ ಎಂದೂ ಕರೆಯವುದುಂಟು. ವ್ಯಾಘ್ರಪಾದ, ಪತಂಜಲಿ ಋಷಿಗಳ ಅನುಗ್ರಹಕ್ಕೆಂದು ಚಿದಂಬರಂನಲ್ಲಿ ಶಿವನು ಆನಂದತಾಂಡವ ನೃತ್ಯವನ್ನು ನಡೆಸಿದನೆಂಬ ಕಥೆಯಿದೆ. ಇದಕ್ಕೆ ಸಾಕ್ಷಿ ಎಂಬಂತೆ ಚಿದಂಬರಂ ದೇವಾಲಯದ ಗುಡಿಯಲ್ಲಿ ಈ ಋಷಿಗಳ ಭಕ್ತ ವಿಗ್ರಹಗಳೂ ಇವೆ. ರಾಮಚಂದ್ರರಾವ್ ಅವರು ವಿವರಿಸಿರುವ ಹಾಗೆ, ಆನಂದತಾಂಡವ ನೃತ್ಯ ಭಂಗಿಯು ಹೆಚ್ಚು ಪ್ರಚಾರದಲ್ಲಿರುವ ನೃತ್ಯ ಭಂಗಿಯಾಗಿದೆ. ನಾಲ್ಕು ಕೈಗಳು, ಮೂರು ಕಣ್ಣುಗಳು, ತಲೆಯ ಎರಡೂ ಕಡೆ ಹರಡಿಕೊಂಡ ಜಟೆ, ತಲೆಯ ಮೇಲೆ ಗಂಗೆ–ಚಂದ್ರರು ಒಂದು ಕಿವಿಗೆ ಕರ್ಣಪತ್ರ, ಇನ್ನೊಂದಕ್ಕೆ ಮಕರಕುಂಡಲ, ಯಜ್ಞೋಪವೀತ, ನಡುವಿಗೆ ಹುಲಿಯ ಚರ್ಮ, ಕಾಲಿಗೆ ಪಾದಸರಸ್ಸು–ಕಿಂಕಣಿಗಳು, ಬಲಗೈಗಳಲ್ಲಿ ಅಭಯ ಹಸ್ತ, ಡಮರುಗ, ದಂಡಹಸ್ತ ಮತ್ತು ಅಗ್ನಿಯನ್ನು ಎಡಗೈಗಳಲ್ಲಿ ಬಲಗಾಲು ಅಕುಂಚಿತವಾಗಿ ಮುಯೂಲಕ ಅಥವಾ ಅಪಸ್ಮಾರನ ಮೇಲೆ, ಎಡಗಾಲು ಗಜಹಸ್ತಭಂಗಿಯಲ್ಲಿರುವ ಶಿವನನ್ನು ಆನಂದತಾಂಡವಮೂರ್ತಿ ಎಂದು ಕರೆದಿದ್ದಾರೆ. ಇವೇ ಲಕ್ಷಣಗಳನ್ನು ಶಿವನಿಧಿ ಗ್ರಂಥದಲ್ಲೂ ಕಾಣುತ್ತೇವೆ.

## ೫. ಸಂಧ್ಯಾತಾಂಡವ

ಶಿವನು ತನ್ನ ಸತಿ ಗೌರಿಯ ಮುಂದೆ ಪ್ರದರ್ಶಿಸಿದ ಒಂಬತ್ತು ಸಾಂಪ್ರದಾಯಿಕ ನೃತ್ಯ ಪ್ರಕಾರಗಳಲ್ಲಿ ಸಂಧ್ಯಾತಾಂಡವ ಒಂದು, ಎಂದು ರಾಮಚಂದ್ರರಾವ್ ಅವರು ಉಲ್ಲೇಖಿಸಿದ್ದಾರೆ. ಪ್ರದರ್ಶನದ ಸಂದರ್ಭದಲ್ಲಿ ಗೌರಿಯು ಅರಮನೆಯ ಪ್ರಾಂಗಣದಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದು, ವಿಷ್ಣು ಮತ್ತು ನಂದಿಯರು ಮೃದಂಗವನ್ನು ಬಾರಿಸುತ್ತಿದ್ದು, ಬ್ರಹ್ಮನು ತಾಲವನ್ನು ನಾರದ, ಭೃಂಗಿ, ಸುಖ ಋಷಿ, ದಿಕ್ಪಾಲಕರು, ಇಂದ್ರ ಮತ್ತು ಅಗ್ನಿಯರೊಡನೆ, ಶಿವನ ಮಕ್ಕಳಾದ ಗಣೇಶ, ಸ್ಕಂದರು ಉಪಸ್ಥಿತರಿದ್ದು ಶಿವನ ಸಂಧ್ಯಾತಾಂಡವ ನೃತ್ಯವನ್ನು ವೀಕ್ಷಿಸಿದರು.[ಥ]

ಶಿವನಿಧಿ ಗ್ರಂಥದಲ್ಲಿ ರಚಿಸಿರುವಂತೆ ಶಿವನ ಸಂಧ್ಯಾತಾಂಡವ ರೂಪವೈಶಿಷ್ಟ್ಯ ಪ್ರತಿಮಾ ಲಕ್ಷಣಗಳು ಹೀಗಿವೆ. ಶಿವನು ನಾಲ್ಕು

ಕೈಗಳನ್ನು ಮತ್ತು ಮೂರು ಕಣ್ಣುಗಳನ್ನು ಹೊಂದಿದವನಾಗಿ, ಜಟಾಮುಕುಟಧಾರಿಯಾಗಿ, ಗಂಗೆಯನ್ನು ಧರಿಸಿದವನಾಗಿ ಚಿತ್ರಿಸಿದ್ದಾರೆ. ಬಲಗೈಯಲ್ಲಿ ಢಮರುವನ್ನು ಹಿಡಿದು ಮತ್ತು ಅಭಯಮುದ್ರೆಗಳಿಂದ ಅನುಗ್ರಹಿಸುತ್ತಿರುವಂತೆ, ಎಡಗೈಯಲ್ಲಿ ನವಿಲುಗರಿಯಿದ್ದು ಮತ್ತು ವಿಸ್ಮಯವನ್ನು ಸೂಚಿಸುವ ಮುದ್ರೆಯಿಂದ ಕೂಡಿದೆ. ಎಡಗಾಲನ್ನು ಮಡಚಿ ಮತ್ತು ಬಲಗಾಲನ್ನು ಮೇಲಕ್ಕೆ ಚಾಚಿರುವಂತಿದ್ದು, ಹಿನ್ನೆಲೆಯಲ್ಲಿ ವಾಸ್ತು ಕಲೆಯ ಅಂಶಗಳಿದ್ದು, ಪಕ್ಕದಲ್ಲಿ ಪೀಠವಿದೆ.

### ೬. ಉಮಾತಾಂಡವ

ಶಿವನನ್ನು ಮುಕ್ಕಣ್ಣನಾಗಿ, ಜಟಾಧಾರಿಯಾಗಿ, ಗಂಗೆಯನ್ನು ಧರಿಸಿದವನಾಗಿ ಉಮಾತಾಂಡವ ಸ್ವರೂಪದಲ್ಲಿ ಶಿವನಿಧಿ ಗ್ರಂಥದಲ್ಲಿ ಅಭಿವ್ಯಕ್ತಿಸಿದ್ದಾರೆ. ಬಲಗೈಯಲ್ಲಿ ಢಮರು, ತ್ರಿಶೂಲ, ಮತ್ತು ಅಭಯಮುದ್ರೆಯಿದ್ದು, ಎಡಗೈಯಲ್ಲಿ ತಲೆಬುರುಡೆ, ವಿಸ್ಮಯಕಾರಿ ಮುದ್ರೆ, ಮತ್ತು ಗಜಹಸ್ತ ಮುದ್ರೆಯಿಂದ ಕೂಡಿರುವ ಆರು ಕೈಗಳಿವೆ. ಎಡಗಾಲನ್ನು ಅಪಸ್ಮಾರದ ಬೆನ್ನಿನ ಮೇಲಿರಿಸಿ, ಬಲಗಾಲನ್ನು ಸರ್ಪದ ತಲೆಯ ಮೇಲಿರಿಸಿದ್ದಾನೆ. ಎಡಪಕ್ಕದಲ್ಲಿ ಉಮೆ ನಿಂತಿದ್ದು ಕೈಯಲ್ಲಿ ಕಮಲದ ಹೂವನ್ನು ಹಿಡಿದುಕೊಂಡು ಆಭರಣಗಳಿಂದ ಅಲಂಕೃತಗೊಂಡಿದ್ದಾಳೆ. ಶಿವನು ಆಭರಣಗಳಿಂದ ಅಲಂಕೃತನಾಗಿ ನೃತ್ತಮೂರ್ತಿಯಾಗಿ ಶೋಭಿಸುತ್ತಿದ್ದು, ಹುಲಿ ಚರ್ಮವನ್ನು ಹೊದ್ದುಕೊಂಡಿದ್ದಾನೆ. ಹಿನ್ನೆಲೆಯನ್ನು ವಾಸ್ತು ಅಂಶಗಳಿಂದ ಅಲಂಕರಿಸಲಾಗಿದೆ.

### ೭. ಗೌರಿತಾಂಡವ

ಎಡಗಡೆ ಗೌರಿ ಮತ್ತು ಬಲ ಪಕ್ಕದಲ್ಲಿ ಭಕ್ತಿಯಿಂದ ಕೈಮುಗಿದು ನಿಂತಿರುವ ನಂದಿಕೇಶ್ವರ ಮತ್ತು ಮಧ್ಯದಲ್ಲಿ ಅಪಸ್ಮಾರದ ಮೇಲೆ ನಿಂತಿರುವ ಶಿವನು ಗೌರಿತಾಂಡವಮೂರ್ತಿಯ ಸ್ವರೂಪದಲ್ಲಿ ಅಭಿವ್ಯಕ್ತಿಗೊಂಡಿದ್ದಾನೆ. ಬಲ ಕೈಗಳಲ್ಲಿ ಢಮರು, ಅಭಯಮುದ್ರೆ, ಎಡಗೈಲ್ಲಿ ಅಗ್ನಿ ಮತ್ತು ಸರ್ಪವನ್ನು ಸುತ್ತಿಕೊಂಡು ಜಟಾಧಾರಿಯಾಗಿ, ಗಂಗೆಯನ್ನು ಧರಿಸಿ, ನೃತ್ಯದ ರಭಸಕ್ಕೆ ಜಟೆಯು ಕೂಡ ನರ್ತಿಸುತ್ತಿರುವಂತೆ ರಚಿಸಲಾಗಿದೆ. ಹುಲಿ ಚರ್ಮವನ್ನು ಮೈಗೆ ಹೊದ್ದುಕೊಂಡು ಶ್ವೇತವರ್ಣದವನಾಗಿ ಚಿತ್ರಿಸಿದ್ದಾರೆ. ಸರ್ವಾಲಂಕಾರ ಭೂಷಿತರಾಗಿರುವ ಶಿವ, ಗೌರಿಯರು ಮತ್ತು ನಂದಿಕೇಶ್ವರರೊಡನೆ ಗೌರಿತಾಂಡವಮೂರ್ತಿ ರೂಪ ವೈಶಿಷ್ಟ್ಯವು ಪೂರ್ಣರೂಪದೊಂದಿಗೆ ಶಿವನಿಧಿ ಗ್ರಂಥದಲ್ಲಿ ಚಿತ್ರಿತಗೊಂಡಿದೆ.

### ೮. ಕಾಲಿಕಾತಾಂಡವ

ಶಿವನನ್ನು ಜಟಾಧಾರಿಯಾಗಿ, ಮುಕ್ಕಣ್ಣನಾಗಿ, ಎಂಟು ಕೈಗಳುಳ್ಳವನಾಗಿ ಕಾಲಿಕಾತಾಂಡವಮೂರ್ತಿಯನ್ನು ಶಿವನಿಧಿ ಗ್ರಂಥದಲ್ಲಿ ಚಿತ್ರಿಸಿದ್ದಾರೆ. ಬಲಗೈಯಲ್ಲಿ ಢಮರು, ತ್ರಿಶೂಲ, ವಜ್ರಾಯುಧ, ಮತ್ತು ಅಭಯಮುದ್ರೆಯಿದ್ದು, ಎಡಗಬಬಬಬೈಯಲ್ಲಿ ಅಗ್ನಿ, ಘಂಟೆ, ತಲೆಬುರುಡೆ, ಮತ್ತು ಗಜಹಸ್ತದಿಂದ ಅಲಂಕರಿಸಿದ್ದಾರೆ. ಬಲಗಾಲನ್ನು ಅಪಸ್ಮಾರದ ಮೇಲಿರಿಸಿ, ಎಡಗಾಲನ್ನು ಮೇಲೆತ್ತಿ ಸರ್ಪದ ತಲೆಯ ಮೇಲಿಟ್ಟು ನಿಂತಿದ್ದಾನೆ. ಹಿನ್ನೆಲೆಯಲ್ಲಿ ವಾಸ್ತು ಕಲೆಯ ಅಂಶಗಳಿಂದ ಅಲಂಕರಿಸಿದ್ದಾರೆ. ಜಟೆಯಲ್ಲಿ ಗಂಗೆ ಮತ್ತು ನವಿಲುಗರಿಯಿದ್ದು ಸರ್ವಾಲಂಕಾರ ಭೂಷಿತನಾಗಿ, ಹುಲಿ ಚರ್ಮವನ್ನು ಹೊದ್ದ ಶಿವನನ್ನು ಕಾಲಿಕಾತಾಂಡವಮೂರ್ತಿಯಾಗಿ ಅಭಿವ್ಯಕ್ತಿಸಿದ್ದಾರೆ.

### ೯. ತ್ರಿಪುರತಾಂಡವ

ತಾರಕಸುರನನ್ನು ವಧಿಸಿದ ನಂತರ ಶಿವನು ತ್ರಿಪುರತಾಂಡವನೃತ್ಯವನ್ನು ಪ್ರದರ್ಶಿಸಿದನೆಂದು ಪುರಾಣಗಳಲ್ಲಿ ವಿವರಣೆಯಿದೆ. ಶಿವನಿಧಿ ಗ್ರಂಥದಲ್ಲಿ ಶಿವನು ಹದಿನಾರು ಕೈಗಳನ್ನು ಹೊಂದಿದ್ದು, ಎಡ ಪಕ್ಕದಲ್ಲಿ ಗೌರಿ ಮತ್ತು ಬಲಪಕ್ಕದಲ್ಲಿ ಸ್ಕಂದನು ಇರುವಂತೆ ಚಿತ್ರಿಸಿದ್ದಾರೆ. ಬಲಗೈಯಲ್ಲಿ ಅಭಯಮುದ್ರೆ, ಡಮರುಗ, ವಜ್ರ, ಭರ್ಜಿ, ಉರುಲು, ಉಳಿ, ದಂಡ, ಮತ್ತು ಸರ್ಪಗಳನ್ನು ಧರಿಸಿದ್ದಾನೆ. ಎಡಗೈಗಳಲ್ಲಿ ಒಂದು ಕೈನ್ನು ಬಾಗಿದ ತೊಡೆಯ ಮೇಲೆ, ಬೆಂಕಿ, ಪುಸ್ತಕ, ಅಭಯಮುದ್ರೆ, ಬಾವುಟ, ಗುರಾಣಿ, ಘಂಟೆ, ಮತ್ತು ಬುರುಡೆಗಳನ್ನು ಹಿಡಿದಿದ್ದಾನೆ. ಹುಲಿ ಚರ್ಮವನ್ನು ಹೊದ್ದ ಶಿವನ ಜಟೆಯು ನೃತ್ಯದ ರಭಸಕ್ಕೆ ಅತ್ತಿಂದಿತ್ತ ಹಾರಾಡುತ್ತಿರುವಂತೆ ಚಿತ್ರಿಸಲಾಗಿದೆ. ಅಪಸ್ಮಾರದ ಮೇಲೆ ನಿಂತಿರುವ ಶಿವನನ್ನು ಶ್ವೇತವರ್ಣದಲ್ಲಿ ಚಿತ್ರಿಸಿದ್ದಾರೆ. ಪಕ್ಕದಲ್ಲಿರುವ ಗೌರಿಯು ಸರ್ವಾಲಂಕಾರಭೂಷಿತೆಯಾಗಿ ಕಂಗೊಳಿಸುವಂತೆ ಚಿತ್ರಿಸಿದ್ದಾರೆ. ಸ್ಕಂದನು ಭಕ್ತಿಯಿಂದ ಕೈಮುಗಿದು ನಿಂತಿದ್ದಾನೆ. ಜಟೆಯಲ್ಲಿ ಗಂಗೆ, ನವಿಲುಗರಿಗಳಿವೆ.

### ೧೦. ಸಂಹಾರತಾಂಡವಮೂರ್ತಿ

ಶಿವನು ದಕ್ಷನನ್ನು ವೀರಭಧ್ರನ ರೂಪದಲ್ಲಿ ವಧಿಸಿದ ನಂತರ ಸಂಹಾರತಾಂಡವ ನೃತ್ಯವನ್ನು ಪ್ರದರ್ಶಿಸಿದನೆಂದು ಶಿವಪುರಾಣಗಳಲ್ಲಿ ವಿವರಣೆಯಿದೆ. ಶಿವನನ್ನು ಮೂರುಕಣ್ಣು ಮತ್ತು ಎಂಟು ಕೈಗಳಿರುವಂತೆ ಚಿತ್ರಿಸಲಾಗಿದೆ. ಜಟೆಯು ತಿರುಗುತ್ತಿರುವಂತೆ ಕಾಣುತ್ತದೆ. ಎಡಗಾಲನ್ನು ಅಪಸ್ಮಾರನ ಮೇಲಿಟ್ಟು ನಿಂತಿದ್ದು, ಬಲಗಾಲನ್ನು ಮೇಲಕ್ಕೆತ್ತಿ ನಿಂತಿರುವ ಭಂಗಿಯಲ್ಲಿ ಚಿತ್ರಣ ಮಾಡಿದ್ದಾರೆ. ಹುಲಿ ಚರ್ಮವನ್ನು ಮೈಮೇಲೆ ಹೊದ್ದು ನಿಂತಿರುವ ಶಿವನ ಬಲ ಕೈಗಳಲ್ಲಿ ಅಭಯಮುದ್ರೆಯಿದೆ. ಭರ್ಜಿ, ಉರುಲು, ಮತ್ತು ಡಮರುವನ್ನು ಹಿಡಿದಿದ್ದಾನೆ. ಎಡಕೈಗಳಲ್ಲಿ ಬುರುಡೆ, ಅಗ್ನಿ ಪಾತ್ರೆ, ವರದಮುದ್ರೆ, ಮತ್ತು ಆನೆಯ ದಂತವನ್ನು ಕೈಯಲ್ಲಿರುವಂತೆ ಚಿತ್ರಿಸಿದ್ದಾರೆ. ಬಲಗಡೆ ನಂದೀಶ ಮತ್ತು ಎಡಭಾಗದಲ್ಲಿ ಗೌರಿಯರನ್ನು ಚಿತ್ರಣ ಮಾಡಲಾಗಿದೆ.

### ೧೧. ಉಪಸಂಹಾರ

ಶಿವನನ್ನು ನೃತ್ತಮೂರ್ತಿ ಸ್ವರೂಪದಲ್ಲಿ ಅಭಿವ್ಯಕ್ತಿಸಿರುವ ಶಿವನಿಧಿಗ್ರಂಥವು ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿನ ಕಲಾಕೃತಿಗಳಿಗೆ ಉದಾಹರಣೆಯಾಗಿದೆ. ಶಿವಪುರಾಣದಲ್ಲಿ ಬರುವ ಕಥನಗಳಿಂದ ಆಯ್ದುಕೊಂಡಿರುವ ಶಿವನನ್ನು ಕುರಿತ ಕಥನಗಳನ್ನು ಶಿವನಿಧಿ ಗ್ರಂಥದಲ್ಲಿ ಚಿತ್ರಿಸಲಾಗಿದೆ. ಆದ್ದರಿಂದ ಪೌರಾಣಿಕ ಹಿನ್ನೆಲೆಯಿರುವ ಕಲಾಕೃತಿಗಳಿಂದ, ಸಾಂಪ್ರದಾಯಿಕ ಶೈಲಿ ಮತ್ತು ಕಥಾ ನಿರೂಪಣೆ ಹೆಚ್ಚು ಪ್ರಶಸ್ತ್ಯ ದೊರಕಿದೆ. ದಕ್ಷಿಣ ಭಾರತದ ಶೈವ ದೇವಾಲಯಗಳಲ್ಲಿ ಶಿಲ್ಪ ಮತ್ತು ಭಿತ್ತಿ ಚಿತ್ರಗಳಲ್ಲಿ ನೃತ್ತಮೂರ್ತಿ ರೂಪವೈಶಿಷ್ಟ್ಯವನ್ನು ಅಭಿವ್ಯಕ್ತಿಸಿದ್ದಾರೆ. ಇದರಿಂದ ಶಿವನ ನೃತ್ತಮೂರ್ತಿ ಸ್ವರೂಪವು ಜನರ ಮನಸ್ಸಿನಲ್ಲಿ ಬೇರುಬಿಟ್ಟಿದೆ.

ರೇಖಾಪ್ರಧಾನವಾಗಿರುವ ಕಲಾಕೃತಿಗಳಲ್ಲಿ ವರ್ಣಸಂಯೋಜನೆಯಲ್ಲಿ ಮೂಲ ಮತ್ತು ಮಿಶ್ರಿತ ಬಣ್ಣಗಳನ್ನು ಉಪಯೋಗಿಸಲಾಗಿದೆ. ವಾಸ್ತುಶಿಲ್ಪದ ಅಂಶಗಳಿ ಕಲಾಕೃತಿಗಳ ಸಂಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಶಿವನ ಆಯುಧಗಳು, ಭಂಗಿ, ವಸ್ತ್ರಾಭರಣಗಳನ್ನು ಚಿತ್ರಿಸುವಲ್ಲಿ ಸೂಕ್ಮವಾದ ರೇಖಾವಿನ್ಯಾಸ ಮತ್ತು ಸಂಪೂರ್ಣ ವಿವರಗಳೊಂದಿಗೆ ಕಲಾವಿದರು ಚಿತ್ರಿಸಿದ್ದಾರೆ. ಶಿವ ಮತ್ತು ಗೌರಿಯರನ್ನು ದೈವಿಕವಾದಂತಹ ಲಕ್ಷಣಗಳೊಂದಿಗೆ ಚಿತ್ರಿಸಿದ್ದು, ರೂಪವೈಶಿಷ್ಟ್ಯಗಳನ್ನು ಕಾರಣಾಗಮಶಾಸ್ತ್ರದಿಂದ ಆಯ್ದುಕೊಂಡಿರುವುದು ವೈಶಿಷ್ಟ್ಯಪೂರ್ಣಆಗಿದೆ. ಈ ಗ್ರಂಥದಲ್ಲಿ ಉಲ್ಲೇಖಗೊಂಡಿರುವ ಪ್ರತಿಮಾಶಾಸ್ತ್ರದ ಅಂಶಗಳನ್ನು ಕಲಾಕೃತಿಗಳ ರಚನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಕಲಾಕೃತಿಗಳು ನಡೆದ ಘಟನೆಗಳ ಒಂದು ಆಯಾಮವನ್ನು ಮಾತ್ರ ಅಭಿವ್ಯಕ್ತಿಸುವುದರಿಂದ

ಸಂಪೂರ್ಣ ಕಥೆಯನ್ನು ಘಟನೆಯನ್ನು ವೀಕ್ಷಕನೇ ಊಹಿಸಿಕೊಂಡು ಚಿತ್ರವೀಕ್ಷಣೆ ಮಾಡುವುದಕ್ಕೆ ಪ್ರೇರೇಪಿಸುತ್ತವೆ. ಇದರಿಂದ ವೀಕ್ಷಕನಿಗೆ ಕಲಾಕೃತಿಯ ವೀಕ್ಷಣೆಯ ಮುಂಚೆಯೇ ಕಥೆಯಲ್ಲಿನ ಘಟನೆ ಮತ್ತು ವಿಷಯದ ಅರಿವಿರಬೇಕಾಗುತ್ತದೆ ಮತ್ತು ಕಲಾಕೃತಿಯ ವೀಕ್ಷಣೆಗೆ ಪೂರ್ವಸಿದ್ಧತೆಯೂ ಬೇಕಾಗುತ್ತದೆ. ಹಾಗಾಗಿ ಮೈಸೂರು ಸಾಂಪ್ರದಾಯಿಕ ಚಿತ್ರಕಲೆಯು ವಿಶಿಷ್ಟವಾದ ಅನುಭವವನ್ನು ವೀಕ್ಷಕನಿಗೆ ನೀಡುತ್ತವೆ. ಕರ್ನಾಟಕದ ಸಾಂಸ್ಕೃತಿಕ ಮತ್ತು ಕಲಾ ಪರಂಪರೆಗೆ ಮೈಸೂರು ಸಾಂಪ್ರದಾಯಿಕ ಶೈಲಿಯ ಕೊಡುಗೆಯು ಮಹತ್ವದ್ದಾಗಿದೆ.

**ನೃತ್ತಮೂರ್ತಿ ರೂಪವೈಶಿಷ್ಟ್ಯದಲ್ಲಿ ಶಿವನ ಅಭಿವ್ಯಕ್ತಿ**



ಚಿತ್ರ – ೦೧. ಆನಂದತಾಂಡವಮೂರ್ತಿ



ಚಿತ್ರ – ೨. ಸಂಧ್ಯಾತಾಂಡವಮೂರ್ತಿ



ಚಿತ್ರ – ೦೩. ಉಮಾತಾಂಡವಮೂರ್ತಿ



ಚಿತ್ರ – ೦೪. ಗೌರಿತಾಂಡವಮೂರ್ತಿ



ಚಿತ್ರ – ೦೫. ಕಾಳಿಕಾತಾಂಡವಮೂರ್ತಿ



ಚಿತ್ರ – ೦೬. ತ್ರಿಪುರತಾಂಡವಮೂರ್ತಿ



ಚಿತ್ರ – ೦೭. ಸಂಹಾರತಾಂಡವಮೂರ್ತಿ

[i] ಶೋಭ, ಟಿ. ಮೈಸೂರು ಸಾಂಪ್ರದಾಯಿಕ ಚಿತ್ರಕಲೆ. ೨೦೦೯. ಸಂ, ಅಂಬಳಿಕೆ ಹಿರಿಯಣ್ಣ. ಇತಿಹಾಸ ಮತ್ತು ಪುರಾತತ್ವ. ಮಾನಸ ಗಂಗೋತ್ರಿ:ಮೈಸೂರು. ಪುಟ – ೭೧೧.

[ii] ಅದೇ, ಪುಟ– ೭೧೧.

[iii] ಒಡೆಯರ್, ಮುಮ್ಮಡಿ ಕೃಷ್ಣರಾಜ. (೧೭೯೪–೧೮೬೮). ೨೦೦೪. ಶ್ರೀ–ತತ್ವ–ನಿಧಿ. ಶಿವನಿಧಿ. (ಸಂ) ರಮೇಶ, ಕೆ ವಿ. ಓರಿಯಂಟಲ್ ರಿಸರ್ಚ ಇನ್ಸ್ಟಿಟ್ಯೂಟ್:ಮೈಸೂರು.

[iv] ಶಿವರಾಮಮೂರ್ತಿ, ಸಿ. ೧೯೭೪. ನಟರಾಜ ಇನ್ ಆರ್ಟ್, ಥಾಟ್, ಆಂಡ್ ಲಿಟರೇಚರ್. ನ್ಯಾಷನಲ್ ಮ್ಯೂಸಿಯಂ:ನ್ಯೂದೆಹಲಿ. ಪುಟ – ೩

[v] ಅದೇ, ಪುಟ – ೯– ೧೧.

[vi] ರಾವ್.ಗೋಪಿನಾಥ ಟಿ ಎ. ೧೯೧೬. ಎಲಿಮೆಂಟ್ಸ್ ಆಫ್ ಹಿಂದು ಐಕನೋಗ್ರಫಿ. ಮದ್ರಾಸ್:ಲಾ ಪ್ರಿಂಟಿಂಗ್ ಹೌಸ್. ಪುಟ – ೨೨೩.

[vii] ಭಟ್, ಎನ್ ಆರ್. ೨೦೦೮. ಶೈವಿಸಂ ಇನ್ ದ ಲೈಟ್ ಆಫ್ ಎಪಿಕ್ಸ್, ಪುರಾನಾಸ್, ಆಂಡ್ ಆಗಮಾಸ್. ವಾರಣಾಸಿ:ಇಂಡಿಕಾ. ಪುಟ – ೨೯೧.

[viii] ಝಿಮ್ಮರ್, ಹೆನ್ರಿಚ್. ೧೯೪೬. ಪುನರ್ ಮುದ್ರಣ ೧೯೯೯. ಮಿತ್ಸ್ ಆಂಡ್ ಸಿಂಬಲ್ಸ್ ಇನ್ ಇಂಡಿಯನ್ ಆರ್ಟ್ ಆಂಡ್ ಸಿವಿಲ್ಯಜೇಷನ್ಸ್. ಮೋತಿಲಾಲ್ ಬನಾರಸಿದಾಸ್:ದೆಹಲಿ. ಪುಟ – ೧೫೨,

[ix] ಕುಮಾರಸ್ವಾಮಿ, ಆನಂದ. ದ ಡ್ಯಾನ್ಸ್ ಆಫ್ ಶಿವ. ಪುಟ – ೩೫.

[x] ರಾಮಚಂದ್ರ ರಾವ್, ಎಸ್ ಕೆ. ೨೦೦೪. ಮೈಸೂರು ಚಿತ್ರಮಾಲಾ. ಬೆಂಗಳೂರು:ಕರ್ನಾಟಕ ಚಿತ್ರಕಲಾ ಪರಿಷತ್ತು.